# 'ಸುಧಾ' ಜೊತೆಗಿನ ಓದುಗರ ಒಡನಾಟ

## ಕಲೆಗೆ ಸ್ಫೂರ್ತಿ 'ಸುಧಾ'

1969ರಿಂದಲೂ ನಾನು 'ಸುಧಾ' ಓದುತ್ತಿರುವೆ. ಅಂದು ವಿಶೇಷ ಆಕರ್ಷಣೆಯಾಗಿದ್ದುದು ಬಾಲವಿಹಾರ ಪುಟ. ಚಿತ್ರಕಥಾ ಮಾಲಿಕೆಗಳು ಬಹಳ ಕುತೂಹಲಕಾರಿಯಾಗಿದ್ದವು. 'ಸುಧಾ' ಬರುವ ದಾರಿಯನ್ನೇ ಕಾಯುವಂತೆ ಮಾಡಿದ್ದವು.

ಅನಂತರ ಧಾರಾವಾಹಿಗಳ ಆಕರ್ಷಣೆಗೆ ಒಳಗಾದೆ. ಕಲಾತ್ಮಕ ಚಿತ್ರಗಳನ್ನು ನೋಡುತ್ತ ಅನುಕರಿಸಲು ಪ್ರಾರಂಭಿಸಿದೆ. ಚಂದ್ರನಾಥ, ಜಿ.ಕೆ. ಸತ್ಯ, ರಮೇಶ, ಶ್ರೀ ಮುಂತಾದ ಚಿತ್ರಕಲಾವಿದರ ಸುಂದರ ಚಿತ್ರಗಳನ್ನು ನೋಡುವ ಸದವಕಾಶ ಸಿಕ್ಕಿತು. ನಂತರ ರಾ. ಸೂರಿ, ಮನೋಹರ, ಗುಜ್ಜಾರರವರು ಈ ಬಳಗ ಸೇರಿಕೊಂಡರು. ರಾಮಮೂರ್ತಿಯವರು ವಾರದ ವ್ಯಕ್ತಿಯ ಚಿತ್ರ, ಹಾಸ್ಯ ಲೇಖನಗಳಿಗೆ ಬರೆಯುತ್ತಿದ್ದ ರೇಖಾಚಿತ್ರಗಳನ್ನು ಮರೆಯುವಂತಿಲ್ಲ. ನಾನೂ ವ್ಯಂಗ್ಯಚಿತ್ರ, ಫೋಟೊ, ಲೇಖನಗಳನ್ನು ಕಳುಹಿಸಿದಾಗ ಅವುಗಳನ್ನು ತಿದ್ದಿ ಪ್ರಕಟಿಸಿ ನನ್ನನ್ನು ಲೇಖಕನನ್ನಾಗಿಯೂ ರೂಪಿಸಿತು 'ಸುಧಾ'.

ಈಗಲೂ ಪ್ರತೀ ವಾರ 'ಸುಧಾ' ಬರುವಿಕೆಯನ್ನು ಮೊದಲಿನ ಕುತೂಹಲದಿಂದಲೇ ಕಾಯುತ್ತೇನೆ.

—ಗ.ಮ. ತುಂಬೇಮನೆ, ಶಿರಸಿ

## ನನ್ನ ಕಣ್ಮಣಿಗೆ ಮುಪ್ಪೇ ಇಲ್ಲ!

'ಸುಧಾ' ಶುರುವಾದಾಗ ನಾನು 15ರ ಯುವತಿ. ಅಪ್ಪ ಮೊದಲ ಬಾರಿಗೆ ಅವಳನ್ನು ಕರೆತಂದಾಗ ಅದೇನೋ ಖುಷಿ. 'ಇನ್ಮೇಲೆ ಪ್ರತಿವಾರ ತೆಗೆದುಕೊಂಡು ಬಾ' ಅಂತ ಅಪ್ಪನಿಗೆ ಹೇಳಿ ಆಯಿತು. ಅವಳ ಬಾಲ್ಯ ನನ್ನ ಜೊತೆಜೊತೆಗೂ ಆಗಿ ಅವಿನಾಭಾವ ಸಂಬಂಧವೇ ಆಯ್ತು. ಇನ್ನೂ ಒಂದು ವಾರ ಕಾಯಬೇಕಲ್ಲ ಎಂಬ ಚಡಪಡಿಕೆ ಬೇರೆ. ಬಂದ ತಕ್ಷಣ ಅವಳನ್ನು ಹಿಡಿದೇ ಊಟ, ತಿಂಡಿ ಎಲ್ಲ. ಬೇರೆ ಯಾರಾದ್ರೂ ತೆಗೆದುಕೊಂಡು ಬಿಟ್ಟರೆ ಅಂತ ಹಾಸಿಗೆ ಕೆಳಗಡೆ ಬಚ್ಚಿಡುತ್ತಿದ್ದೆ.

ಮದುವೆ ಆಗಿ ಹೋದ ಮೇಲೆ, ಅಲ್ಲಿ 'ಸುಧಾ'ಳನ್ನು ತರಿಸುತ್ತಾರೋ ಇಲ್ಲವೋ ಎಂಬ ಆತಂಕ. ಅಲ್ಲಿಯೂ ಅಸ್ತು ಎಂದಾಗ ಖುಷಿಯೋ ಖುಷಿ. ಮನೆಕೆಲಸ, ಕಚೇರಿ ಕೆಲಸ ಮುಗಿಸಿ ರಾತ್ರಿ ಆಗುತ್ತಿದ್ದುದನ್ನೇ ಕಾದು ಮಲಗುವಾಗ ಓದುತ್ತಾ ಹಾಗೇ ನಿದ್ದೆಗೆ ಜಾರುತ್ತಿದ್ದೆ. ಅವಳಿಲ್ಲದೆ ನಾನಿಲ್ಲ, ನಾನಿಲ್ಲದೆ ಅವಳಿಲ್ಲ ಎನ್ನುವಂತೆ ಆಗಿತ್ತು.

ಅವಳು ಬಾಲಿಕೆಯಾಗಿ, ಹದಿಹರೆಯದ ಯುವತಿಯಾಗಿ, ಪ್ರೌಢ ಮಹಿಳೆಯಾಗಿ, ಎಂದೆಂದೂ ಚಿರಯೌವನೆಯಾಗಿ ಕಂಗೊಳಿಸಿ 60ಕ್ಕೆ ಬಂದಿದ್ದರು ಸಹ ಅದೇ ರೂಪು ಲಾವಣ್ಯ ಉಳಿದುಕೊಂಡಿದೆ. ನನಗೆ 75 ದಾಟಿದರೂ ಅವಳಿಗೆ ಮಾತ್ರ ಮುಪ್ಪೇ ಇಲ್ಲ.

—ವಾಣಿ ಪ್ರಭಾಕರ್

## ಹೋಲಿಕೆಗೆ ನಿಲುಕದ ಮೈತ್ರಿ

'ಸುಧಾ'ಳ ನಂಟು 1973ರಿಂದ ನಿರಂತರವಾಗಿ ಮುಂದುವರೆದಿದೆ. ಆಗಷ್ಟೇ ಶಾಲೆಗೆ ನನ್ನ ಪ್ರವೇಶವಾಗಿತ್ತು. ಸರ್ಕಾರಿ ಶಾಲೆ, ನಾಲ್ಕು ತರಗತಿಗಳಿಗೂ ಒಬ್ಬರೇ ಮಾಸ್ತರು. ಕಾಗುಣಿತ ಬರೆಯಲು ಹೇಳುತ್ತಿದ್ದರು. ನನಗೋ ಅತೀ ಬೋರು. ನನ್ನ ಬೇಸರ ಗಮನಿಸಿದ ತಂದೆ, ತೊಡೆ ಮೇಲೆ ಕೂಡಿಸಿಕೊಂಡು 'ಸುಧಾ' ಪತ್ರಿಕೆಯ ಪ್ರತೀ ಲೇಖನವನ್ನು ಓದಿಸುತ್ತಿದ್ದರು.

ಮೂರು ತಿಂಗಳಲ್ಲಿ ಇಡೀ ಪತ್ರಿಕೆ ಓದಲು ಕಲಿತು, ಶಾಲೆಯಲ್ಲಿ ಕಾಗುಣಿತ ಬರೆಯುವುದನ್ನು ತಪ್ಪಿಸಿಕೊಂಡೆ. 'ಸುಧಾ', ನನಗೆ ಓದಲು ಕಲಿಸಿದ ಗುರು. ನಮ್ಮ ಬಾಲ್ಯದ 'ಸುಧಾ'ಳ ಮಕ್ಕಳಪುಟ ಹೋಲಿಕೆಗೆ ನಿಲುಕದು.

—ಸಿ.ಆರ್. ಇಂದಿರಾ ಪ್ರಿಯದರ್ಶಿನಿ, ಬೆಂಗಳೂರು

## ಬೆನ್ನು ತಟ್ಟುವ ಪತ್ರಿಕೆ

'ಸುಧಾ'ದಲ್ಲಿ 'ಎಳೆಯರ ಅಂಗಳ' ವಿಭಾಗದಲ್ಲಿ ಆಗಾಗ ಮಕ್ಕಳ ಕಥೆ/ ಶಿಶುಗೀತೆಗಳನ್ನು ಪ್ರಕಟಿಸಿ, ನನಗೆ ಪ್ರೋತ್ಸಾಹ ನೀಡಿದ್ದಲ್ಲದೆ, ನಾಡಿನ ಓದುಗರಿಗೆ ನನ್ನನ್ನು ಪರಿಚಯ ಮಾಡಿಕೊಂಡು ಬರುತ್ತಿರುವ 'ಸುಧಾ'ಳ ಒಡನಾಟದ ಬಗ್ಗೆ ಎಷ್ಟು ಕೊಂಡಾಡಿದರೂ ಸಾಲದು.

—ಅರವಿಂದ ಜಿ. ಜೋಷಿ, ಮೈಸೂರು

## ಸಹೃದಯರ ಮನ ತಣಿಸಲಿ

80ರ ದಶಕದಲ್ಲಿ ನಾನು ಮುಂಬೈನಲ್ಲಿದ್ದಾಗ ಅಂಗಡಿಯವನೊಬ್ಬ ಚೆಂಬೂರಿನ ಅಂಗಡಿಯಿಂದ ಕೊಲಾಬಾಗೆ ನನಗಾಗಿ 'ಸುಧಾ' ತರುತ್ತಿದ್ದ. ನಾನು ವಿದೇಶದಲ್ಲಿರುವಾಗಲೂ ಅಂತರ್ಜಾಲದಲ್ಲಿ 'ಸುಧಾ' ಸಂಗಾತಿಯಾಗಿದ್ದಳು. ನಾಡಿನ ಪ್ರಸಿದ್ಧ ಲೇಖಕರ ಅನೇಕ ಕಾದಂಬರಿಗಳನ್ನು ನಾನು ಓದಿದ್ದು 'ಸುಧಾ'ದಲ್ಲೇ. ಈಗ 60 ತುಂಬಿ ನಮ್ಮಂತೆಯೇ ಹಿರಿಯ ನಾಗರಿಕಳಾಗಿ ಮಾಗಿದ 'ಸುಧಾ' ಇನ್ನೂ ಉತ್ತಮ ಬರಹಗಳಿಂದ ಮೈದುಂಬಿಕೊಂಡು ನೂರಾರು ವರುಷ ಸಹೃದಯರ ಮನ ತಣಿಸಲಿ.

—ಗೀತಾ ನೆಲ್ಲೀಕಾಯಿ

## 'ಸುಧಾ'ದಿಂದ ಬರಹಗಾರನ ಪಟ್ಟ

ಬರಹಗಾರನಾಗಿ 'ಸುಧಾ' ಜೊತೆಗಿನ ನನ್ನ ಅನುಬಂಧ ಸರಿಸುಮಾರು 22 ವರ್ಷಗಳದ್ದು. 2002ರ ಜೂನ್ ತಿಂಗಳ ಸಂಚಿಕೆಯಲ್ಲಿ 'ಮುಂಗಾರು' ಎಂಬ ಶೀರ್ಷಿಕೆಯ ಕಿರುಗವಿತೆಯೊಂದು ಮೊಟ್ಟಮೊದಲ ಬಾರಿಗೆ ಪ್ರಕಟವಾದಾಗ ಮನಕ್ಕೇನೋ ಪುಳಕ; ಆನಂದ. ಅದಾದ ನಂತರ ನನ್ನ ಹಲವು ಕಿರುಗವಿತೆಗಳು, ಮಕ್ಕಳ ಪದ್ಯಗಳು, ವೈದ್ಯಕೀಯ, ವೈದ್ಯಕೀಯೇತರ ಲೇಖನಗಳು ಪ್ರಕಟವಾದವು. 2011 ಮತ್ತು 2012ರ 'ಸುಧಾ ಯುಗಾದಿ ವಿಶೇಷಾಂಕ'ದ ಪ್ರಬಂಧ ಸ್ಪರ್ಧೆಯಲ್ಲಿ ಎರಡು ಬಾರಿ ಬಹುಮಾನವೂ ಲಭಿಸಿತು.

ವೃತ್ತಿ ಬದುಕಿನ ಜಂಜಡದ ನಡುವೆ ಬರವಣಿಗೆಯನ್ನು ಹವ್ಯಾಸವನ್ನಾಗಿ ರೂಢಿಸಿಕೊಂಡಿರುವ ನನ್ನನ್ನು ನಿರಂತರವಾಗಿ ಪ್ರೋತ್ಸಾಹಿಸುತ್ತಲೇ ಬಂದಿರುವ 'ಸುಧಾ'ಗೆ ಧನ್ಯವಾದಗಳು.

— ಡಾ. ಕೆ.ಬಿ. ರಂಗಸ್ವಾಮಿ, ತುಮಕೂರು

## ತಲೆಮಾರುಗಳಿಗೆ 'ಸುಧಾ' ಬೆಸುಗೆ

ನಮ್ಮ ಜೊತೆಜೊತೆಗೆ ಬೆಳೆದು ಬಂದ 'ಸುಧಾ', ಹೆಮ್ಮೆಯ ಗೆಳತಿ. 1970ರಲ್ಲಿ 'ವರದಕ್ಷಿಣೆ' ಬಗ್ಗೆ ಬರೆದ ನನ್ನ ಮೊದಲ ಲೇಖನಕ್ಕೆ ನಗದು ಬಹುಮಾನದ ಜೊತೆಗೆ 'ಸುಧಾ' ಪತ್ರಿಕೆಯು ಮನೆಗೆ ಬಂದಿತ್ತು. ಆನಂತರ ನನ್ನ ಮಗಳು ಬಿಡಿಸಿದ ಚಿತ್ರಗಳು, ನಾನು ಬರೆದ ಪದ್ಯಗಳು, ರೆಸಿಪಿಗಳು ಪ್ರಕಟಗೊಂಡವು. ನನ್ನ ಮತ್ತು 'ಸುಧಾ' ಬೆಸುಗೆ ಇನ್ನಷ್ಟು ಬೆಸೆಯಿತು. ಅಮ್ಮನಿಂದ ಮಗಳಿಗೆ, ಈಗ ಮೊಮ್ಮಗುವಾದರೂ 'ಸುಧಾ', ನಮ್ಮನೆಯ ಸದಸ್ಯರಲ್ಲಿ ಒಂದಾಗಿದ್ದಾಳೆ.

—ಲಲಿತಾ ಬೆಳವಾಡಿ, ಬೆಂಗಳೂರು

## ಆಕರ್ಷಕ ವಿನ್ಯಾಸ

ನನಗಿಂತ 10 ವರ್ಷಗಳ ಹಿಂದೆಯೇ 'ಸುಧಾ' ಹುಟ್ಟಿದ್ದಳು. ನಮ್ಮ ಸಂಬಂಧಿಕರಾಗಿದ್ದ, ನೃತ್ಯ ಕಲಾವಿದರಾಗಿದ್ದ ಕುದ್ರಾಡಿ ವಿಶ್ವನಾಥ ರೈಗಳು, ಬಿಡುವಿನ ಸಮಯದಲ್ಲಿ ಓದಲು ಕೆಲವು ಪುಸ್ತಕಗಳನ್ನು ನೀಡುತ್ತಿದ್ದರು. ಅವುಗಳಲ್ಲಿ ನನಗೆ ಬಹಳ ಇಷ್ಟವಾದುದು 'ಸುಧಾ' ವಾರಪತ್ರಿಕೆ.

'ಸುಧಾ' ಮುಖಪುಟ ವಿನ್ಯಾಸ ತುಂಬಾ ಆಕರ್ಷಕವಾಗಿರುತ್ತಿತ್ತು. ಕಲಾಕಾರರು ತುಂಬಾ ಚೆನ್ನಾಗಿ ವಿನ್ಯಾಸಗೊಳಿಸುತ್ತಿದ್ದರು. ಅಲ್ಲಿಂದ 'ಸುಧಾ' ಓದುವ ಹವ್ಯಾಸ ಬೆಳೆದು ಬಂತು.

ಓದುತ್ತಾ, ನನ್ನಲ್ಲೂ ಬರೆಯುವ ಆಸೆ ಮೊಳೆಯಿತು. ನನ್ನ ಕೆಲವು ಚಿತ್ರಲೇಖನಗಳು ಪ್ರಕಟಗೊಂಡಾಗ ಸ್ವರ್ಗಕ್ಕೆ ಮೂರಲ್ಲ, ಒಂದೇ ಗೇಣು.

—ನಾರಾಯಣ ರೈ, ಕುಕ್ಕುವಳ್ಳಿ